ಆ) ವಾಡಿಕೆಯಂತೆ ಈ ವರ್ಷದಲ್ಲಿ ತುಮಕೂರು ಜಿಲ್ಲೆಯಲ್ಲಿ ಮಳೆಯಾಗಿರುವುದರಿಂದ ಈ ತಾಲ್ಲೂಕನ್ನು ಬರಪೀಡಿತವೆಂದು ಘೋಷಣೆ ಮಾಡಿರುವುದಿಲ್ಲ.

ಇ) ಕುಡಿಯುವ ನೀರಿನ ಸಮಸ್ಯೆಗಳಿರುವ ಗ್ರಾಮಗಳಲ್ಲಿ, ರೂ.20.00 ಲಕ್ಷಗಳಲ್ಲಿ ಪುನಶ್ಚೇತನ, ಕೊಳವೆ ಬಾವಿ ಅಳವಡಿಸುವುದು, ಹೈಡ್ರೋ ಫ್ರಾಕ್ಚರ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

560 ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಸಿಡಿಲು ಬಡಿದ ಸಂತ್ರಸ್ಥ ಬಡ ಪರಿವಾರದವರಿಗೆ 50. ಸಾವಿರ ರೂ.ಪರಿಹಾರ ಧನ ನೀಡಿದ್ದು ನಿಜವೇ;

ಆ) ಅಂತಹ ಘಟನೆಗಳಿಂದ ಶಾಶ್ವತವಾಗಿ ಅಂಗವಿಕಲರಾದವರಿಗೆ, ಗಂಭೀರವಾಗಿ ಗಾಯಗೊಂಡವರಿಗೆ ಯಾವ ಪರಿಹಾರ ನೀಡಲಾಗುತ್ತಿದೆ ಹಾಗೂ ಇಂತಹ ಎಷ್ಟು ಜನರಿಗೆ ಕಳೆದ ವರ್ಷ ಪರಿಹಾರ ನೀಡಲಾಗಿದೆ.

ಇ) ಹಾಗಿಲ್ಲದಿದ್ದರೆ, ಬಡ ಗಾಯಾಳು ಪರಿವಾರದವರ ಸಂಬಂಧವಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ.

ಈ) ಸಿಡಿಲು, ಬರ, ಅತಿವೃಷ್ಟಿಗಳಂತಹ ಪ್ರಕೃತಿ ವಿಕೋಪಗಳಲ್ಲಿ ಮೃತ ಪಡುವ ಜಾನುವಾರುಗಳಿಗೆ ಪರಿಹಾರ ನೀಡಲಾಗುತ್ತಿದೆಯೇ ಹಾಗೂ ಪರಿಹಾರ ನೀಡುವಾಗ ಅನುಸರಿಸುವ ಮಾನದಂಡಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಹೌದು.

ಆ) ಇಂತಹ ಘಟನೆಗಳಲ್ಲಿ ಶಾಶ್ವತವಾಗಿ ಅಂಗವಿಕಲರಾದವರಿಗೆ ರೂ. 25,000 ಗಂಭೀವಾಗಿ ಗಾಯಗೊಂಡವರಿಗೆ ರೂ. 5,000 ಪರಿಹಾರ ನೀಡಲು ಅವಕಾಶಗಳಿದೆ. ಕಳೆದ ವರ್ಷ ಒಟ್ಟು 31 ನರಿಗೆ ಪರಿಹಾರ ನೀಡಲಾಗಿದೆ.

ಇ) ಆ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಈ) ಇಲ್ಲ.

2818 (1985) ಶ್ರೀ ಮಲ್ಲಿಕಾರ್ಜುನ್ ಸಿದ್ಧರಾಮಪ್ಪ ಖೂಬ (ಬಸವಕಲ್ಯಾಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?